**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ**672/2020**

ಸಿ.ಡಬ್ಲ್ಯೂ –4 ಪಿ.ಡಬ್ಲ್ಯೂ -2

| | | |
|---|---|---|
| ಹೆಸರು | ಃ | ಶಾಂತಾಬಾಯಿ |
| ತಂದೆಃಗಂಡ | ಃ | ಶರಣಪ್ಪ |
| ವಯಸ್ಸು | ಃ | 70 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಕಿಣ್ಣಿ ಅಬ್ಬಾಸ |

ದಿನಾಂಕಃ14.06.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ನನ್ನ ಮಗ, ಚಾಸಾ-2 ರವರ ಪರಿಚಯ ಇರುವುದಿಲ್ಲ, ಮತ್ತು ಚಾಸಾ-3 ನನ್ನ ಮೈದುನ, ಚಾಸಾ-5 ರಿಂದ 7 ರವರ ಪರಿಚಯ ಇರುತ್ತದೆ.

3.30 ಗಂಟೆಗೆ ಬೆಂಕಿ ಹಚ್ಚಿರುತ್ತಾರೆ. ಮರುದಿನ ನನ್ನ ಮಗನಿಗೆ ಆರೋಪಿತರು ಹೊಡೆದಿರುತ್ತಾರೆ. 3 ನೇ ಆರೋಪಿ ನನ್ನ ಮಗನಿಗೆ ಚಪ್ಪಲಿನಿಂದ ಹೊಡೆದಿರುತ್ತಾಳೆ. 2 ನೇ ಆರೋಪಿ ಕಲ್ಲಿನಿಂದ ಹೊಡೆದಿರುತ್ತಾನೆ, ನನ್ನ ಮಗನ ಕೊರಳಿಗೆ ಟಾವೆಲ ಸುತ್ತಿ ಹೊಡೆದಿರುತ್ತಾರೆ. 20 ಶ್ರಿಗಂಧದ ಗಿಡಗಳು, 6-7 ಬೇವಿನ ಗಿಡ ಹಾಗೂ ಹಣಚಿ ಹಣ್ಣಿನ ಗಿಡ ಹಾಳಾಗಿರುತ್ತವೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾ ಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ನಮ್ಮ ಹೊಲದ ಪಕ್ಕದಲ್ಲಿ ಲಕ್ಷ್ಮಣರವರ ಹೊಲ ಇದೆ ಎಂದರೆ ಸರಿ. ನಮ್ಮ **2** ನೇ ಅಣ್ಣತಮ್ಮಕಿಯಾದ **1** ನೇ ಆರೋಪಿಯ ಹೊಲ ಇರುತ್ತದೆ ಎಂದರೆ ಸರಿ. ದಿ.**05.05.2020** ರಂದು ನಮ್ಮ ಹೊಲದ ಬಂದಾರಿಯಲ್ಲಿ ಹುಲ್ಲು ಸುಡಲು ಬೆಂಕಿ ಹಚ್ಚಿದ್ದರು ಎಂದರೆ ಸರಿ. ನಮ್ಮ ಮಗನ್ಹಿದ ನನಗೆ ವಿಷಯ ಗೊತ್ತಾಗಿತ್ತು ಎಂದರೆ ಸರಿ. **1** ನೇ ಆರೋಪಿರವರಿಗೆ ನನ್ನ ಮಗ ಯಾಕೆ ಹೊಲಕ್ಕೆ ಬೆಂಕಿ ಹಚ್ಚಿದ್ದಿರಾ ಎಂದು ಕೇಳಿದಾಗ ನನ್ನ ಹೊಲ ನಾನು ಏನಾದರೂ ಮಾಡುತ್ತೇನೆ ಎಂದು ಹೇಳಿರುತ್ತಾನೆ ಎಂದರೆ ಸರಿ. **1** ನೇ ಆರೋಪಿ ನನ್ನ ಮಗನಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದರೆ ಸರಿ. ಆರೋಪಿಯ ಹೊಲದಿಂದ ಲಕ್ಷ್ಮಣರವರ ಹೊಲಕ್ಕೆ ಬೆಂಕಿ ಹತ್ತಿ ಅಲ್ಲಿಂದ ನಮ್ಮ ಹೊಲಕ್ಕೆ ಬೆಂಕಿ ಹತ್ತಿರುತ್ತದೆ ಎಂದರೆ ಸರಿ. ನಾನು ಮೇಲೆ ಹೇಳಿದ ಗಿಡಗಳು ಬೆಂಕಿಯ ಶಾಖದಿಂದ ಸುಟ್ಟು ಹೋಗಿರುತ್ತವೆ ಎಂದರೆ ಸರಿ. ಮರುದಿನ ನನ್ನ ಮಗೆ ಹನುಮನ ದೇವರ ಗುಡಿಯ ಹತ್ತಿರ ಇದ್ದಾಗೆ ಆರೋಪಿತರು ಕೂಡಿಕೊಂಡು ಬಂದರು ಎಂದರೆ

ಸರಿ. ನನ್ನ ಮಗನಿಗೆ ಬಲಎಡ ಹೊಟ್ಟೆಗೆ ಕೈ ಮುಷ್ಟಿ ಮಾಡಿ ಗುದ್ದಿರುತ್ತಾರೆ ಎಂದರೆ ಸರಿ. ಕಲ್ಲಿನಿಂದ ನನ್ನ ಮಗನ ಹೊಟ್ಟೆಗೆ ಗುದ್ದಿರುತ್ತಾರೆ ಎಂದರೆ ಸರಿ. ಕಲ್ಲಿನಿಂದ **2** ನೇ ಆರೋಪಿ ನನ್ನ ಮಗನಿಗೆ ಸೊಂಟಕ್ಕೆ ಜಜ್ಜಿರುತ್ತಾನೆ ಹಾಗೂ ಕಾಲಿನಿಂದ ಒದ್ದಿರುತ್ತಾನೆ ಎಂದರೆ ಸರಿ. **3** ನೇ ಆರೋಪಿ ಎಡ ಕಿವಿಗೆ ಹಾಗೂ ಕಪಾಳಕ್ಕೆ ಚಪ್ಪಲಿಯಿಂದ ಹೊಡೆದಿರುತ್ತಾರೆ ಎಂದರೆ ಸರಿ. ನಾನು ಜಗಳವನ್ನು ನೋಡಿ ಬಿಡಿಸಿರುತ್ತೇನೆ ಎಂದರೆ ಸರಿ. ಚಾಸಾ-**5** ಮತ್ತು **6** ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ಜೀವಸಹಿತ ಬಿಡುವುದಿಲ್ಲ ಎಂದು ಜೀವಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಬಿ.ಐ.ಎಸ್. ವಕೀಲರಿಂದ</u>**

ನನಗೆ ಮೂರು ಜನ ಗಂಡು ಮಕ್ಕಳು. ದೊಡ್ಡ ಮಗ ಚಾಸಾ-1 ರವರು, 2 ನೇ ಮಗ ಎಲ್ಲಾಲಿಂಗ, 3 ನೇ ಮಗ ಪ್ರಭುಲಿಂಗ. ಒಬ್ಬ ಮಗ ಊರಿನಲ್ಲಿ ಇರುತ್ತಾನೆ ಮತ್ತೊಬ್ಬನು ಗಾಣಗಾಪೂರದಲ್ಲಿ ಇರುತ್ತಾನೆ ಹಾಗೂ ಮತ್ತೊಬ್ಬನು ಕಲಬುರಗಿಯಲ್ಲಿ ಇರುತ್ತಾನೆ. ಚಾಸಾ-1 ರವರಿಗೆ ಮದುವೆಯಾಗಿದ್ದು ಅವರ ಹೆಂಡತಿ ಸ್ವಲ್ಪ ದಿನದಲ್ಲಿ ಬಿಟ್ಟು ಹೋಗಿರುತ್ತಾಳೆ ಎಂದರೆ ಸರಿ. ನನ್ನ ಸೊಸೆ ಮರಳಿ ಬಂದಿರುವುದಿಲ್ಲ ಎಂದರೆ ಸರಿ. ನನ್ನ ಸೊಸೆ ಹತ್ತಿರ ನನ್ನ ಮಕ್ಕಳು ಹಾಗೂ ನನ್ನ ಗಂಡ ರಾಜಿ ಪಂಚಾಯತಿ ಮಾಡಲು ಹೋಗಿದ್ದರು ಎಂದರೆ ಸಾಕ್ಷಿ ನನ್ನ ಸೊಸೆಯನ್ನು ಕರೆಯಲು ಹೋಗಿದ್ದರು ಎಂದು ಹೇಳುತ್ತಾರೆ. ಆರೋಪಿತರು ನನ್ನ ಮಗನ ಜೊತೆ ರಾಜಿ ಪಂಚಾಯತಿ ಮಾಡಲು ಹೋಗಿರಲಿಲ್ಲ ಅವರಿಗೂ ನಮಗೂ ಸಂಬಂಧ ಇರುವುದಿಲ್ಲ ಎಂದು ಹೇಳುತ್ತಾರೆ. ಆರೋಪಿತರು ನಮ್ಮ ಅಣ್ಣತಮ್ಮಕಿ ಎಂದರೆ ಸರಿ. ನಾನು ಶಾಲೆ ಕಲಿತಿರುವುದಿಲ್ಲ ನನ್ನ ಹೇಳಿಕೆಯಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ನಾನು ಯಾವುದೇ ಸಹಿ ಮಾಡಿರುವುದಿಲ್ಲ. ನಮ್ಮ ಹೊಲದ ನಂತರ ಟೋಪಣ್ಣರವರ ಹೊಲ ಇರುತ್ತದೆ. ಟೋಪಣ್ಣರವರ ಹೊಲದ ಪಕ್ಕದಲ್ಲಿ ಮುತ್ತಣ್ಣರವರ ಹೊಲ ಇರುತ್ತದೆ. ಮುತ್ತಣ್ಣರವರ ಹೊಲದ ನಂತರ ಮುತ್ತಣ್ಣ ಹಾಗೂ ಚೆನ್ನಪ್ಪರವರ ಹೊಲ ಬರುತ್ತದೆ. ಇವರನ್ನು ಹೊರತು ನಮ್ಮ ಅಣ್ಣತಮ್ಮಕಿಯಲ್ಲಿ ಬೇರೆ ಯಾರ ಹೊಲ ಇರುವುದಿಲ್ಲ. 1 ನೇ ಆರೋಪಿಯ ಹೊಲ ನಮ್ಮ ಹೊಲದಿಂದ 2-3 ಹೊಲಗಳು ದಾಟಿ ಇರುತ್ತದೆ. ನನಗೆ ಎಷ್ಟು ಎಕರೆ ಹೊಲ ಇರುತ್ತದೆ ಹೇಳಲು ಆಗುವುದಿಲ್ಲ.1 ನೇ ಆರೋಪಿ ಹಾಗೂ ಚಾಸಾ-1 ರವರ ಜಗಳ ಯಾವ ದಿನಾಂಕದಂದು ಆಯಿತು ಎಂದು ನನಗೆ ಹೇಳಲು ಬರುವುದಿಲ್ಲ. ಯಾರು ಬೆಂಕಿ ಹಚ್ಚಿದ್ದರು ಎಂದು ನಾನು ನೋಡಿರುವುದಿಲ್ಲ. ನನಗೆ ಯಾವ ಗಿಡಗಳು ಸುಟ್ಟಿರುತ್ತವೆ ಎಂದು ಗೊತ್ತಿರುತ್ತವೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನಾನು ಮರುದಿನ ಹೋಗಿ ನೋಡಿರುತ್ತೇನೆ ಯಾವ ಗಿಡಗಳು ಸುಟ್ಟಿರುತ್ತವೆ ಎಂದು ನನಗೆ ಗೊತ್ತು ಎಂದು ನುಡಿಯುತ್ತಾರೆ. ಶ್ರಿಗಂಧದ ಗಿಡಗಳು ತಾವೇ ಬೆಳೆದಿರುತ್ತವೆ. 1 ನೇ ಆರೋಪಿಯ ಹೊಲ ದಾಟಿ 3 ಹೊಲಗಳ ನಂತರ ನಮ್ಮ ಹೊಲ ಬರುತ್ತದೆ ಎಂದರೆ ಸರಿ. 3.30 ಗಂಟೆಗೆ ಬೆಂಕಿ ಹತ್ತಿರುತ್ತದೆ. ಸದರಿ ಸಮಯದಲ್ಲಿ ಬೆಸೀಗೆ ಇತ್ತು ಎಂದರೆ ಸರಿ. ಸದರಿ ಸಮಯದಲ್ಲಿ ನನ್ನ ಹೊಲದಲ್ಲಿ ಯಾವುದೇ ಬೆಳೆ ಇರಲಿಲ್ಲ. 1 ನೇ ಆರೋಪಿ ತನ್ನ ಹೊಲದ ಬೆಂಕಿ ಹಚ್ಚಿದ್ದರಿಂದ ನಮ್ಮ ಹೊಲದ ಬಂದಾರಿ ಸುಟ್ಟು ಗಿಡಗಳು ಸುಟ್ಟಿರುತ್ತವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಚಾಸಾ-1 ರವರೇ ತಮ್ಮ ಬಂದಾರಿಗೆ ಬೆಂಕಿ ಹಚ್ಚಿಕೊಂಡು 1 ನೇ ಆರೋಪಿ ಮೇಲೆ ಆಪಾದನೆ ಮಾಡುತ್ತಾನೆ ಎಂದರೆ ಸರಿಯಲ್ಲ. ನಾನು ಬೆಂಕಿ ಹತ್ತಿದಾಗ ಇರಲಿಲ್ಲ. ನನ್ನ ಮಗ ಹೇಳಿದ ನಂತರವೇ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ನನ್ನ ಮಗ ಸಂಜೆ 6 ಗಂಟೆಗೆ ಬಂದನು. ನಾವು ಆರೋಪಿಯ ಮನೆಗೆ ಹೋಗಿ ವಿಚಾರಿಸಿರಲಿಲ್ಲ. ನಾನು 1 ನೇ ಆರೋಪಿ ಬೆಂಕಿ ಹಚ್ಚಿದ ಬಗ್ಗೆ ಯಾರಿಗೂ ಕೇಳಿರುವುದಿಲ್ಲ. ಹನಮಾನ ಮಂದಿರ ಅದ ನಂತರ ಎಷ್ಟು ಮನೆಗಳ ಅಂತರದಲ್ಲಿ ನಮ್ಮ ಮನೆ ಇದೆ ಎಂದು ಹೇಳಲು ಬರುವುದಿಲ್ಲ. ಹನಮಾನ ದೇವರ ಯಾವ ದಿಕ್ಕಿನಲ್ಲಿ ಜಗಳವಾಯಿತು ಎಂದು ಹೇಳಲು ಬರುವುದಿಲ್ಲ. ನಾನು ಜಗಳವಾಗುವಾಗ ಅಲ್ಲಿಯೇ ಇದ್ದೇನು. ಜಗಳ 2 ಗಂಟೆಗಳವರೆಗೆ ನಡೆಯಿತು. ಚಾಸಾ-5 ಮತ್ತು6 ರವರು ಬಂದು ಜಗಳ ಬಿಡಿಸಿರುತ್ತಾರೆ. 1 ನೇ ಆರೋಪಿಗೆ ಹೃದಯ ಸಂಬಂಧಿತ ಕಾಯಿಲೇ ಇದ್ದು ಚಾಸಾ-1 ರವರೊಂದಿಗೆ ಜಗಳ

ಮಾಡಿಕೊಂಡಿದ್ದನು ಎಂದರೆ ಸರಿಯಲ್ಲ. ಚಾಸಾ-1 ರವರು 1ನೇ ಆರೋಪಿಗೆ ಹೊಡೆ ಬಡೆ ಮಾಡಿರುತ್ತಾರೆ ಆಗ 2 ಹಾಗೂ 3ನೇ ಆರೋಪಿ ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. 2 ಹಾಗೂ 3ನೇ ಆರೋಪಿತರು ಯಾವುದೇ ಹೊಡೆ ಬಡೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಹೊಲದಲ್ಲಿ ಯಾವುದೇ ಶ್ರೀಗಂಧದ ಕಟ್ಟಿಗೆಗಳು ಇರುವುದಿಲ್ಲ ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ.

**ಮರುವಿಚಾರಣೆಃ- ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ